ದಿನಾಂಕ **14.10.2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಲ್. ಎಸ್.ಕೆ . ವಕೀಲರಿಂದ ಃ

ಸರ್ವೆ ನಂ .58, 02 ಎಕರೆ 14 ಗುಂಟೆ ಇರುತ್ತದೆ. ಸರ್ವೆ ನಂ.58 ರ ಪೂರ್ವಕ್ಕೆ- ನಮ್ಮ ಜಮೀನು, ಪಶ್ಚಿಮಕ್ಕೆ- ಹನುಮವ್ವನ ಜಮೀನು, ದಕ್ಷಿಣಕ್ಕೆ - ಕೆರೆ ಇರುತ್ತದೆ. ಸರ್ವೆ ನಂ .58/3 ರ ಜಮೀನಿಗೆ ನಮ್ಮ ಅಜ್ಜ ಸಿದ್ದಪ್ಪ ಮಾಲೀಕ ಮೊದಲಿಗೆ ಇದ್ದನು .ಸರ್ವೆ ನಂ 38 ಮತ್ತು ಸರ್ವೆ ನಂ 58/3 ಕ್ಕೆ ಈ ಮೊದಲು ನಿಂಗವ್ವ ಗಂಡ ಮುನಿಯಪ್ಪ ಮಾಲಿಕ ಇದ್ದನು ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ನಿಂಗವ್ವ ತನ್ನ ಸಂಸಾರದ ಆಡಚಣೆಗಾಗಿ ವಾದಿಗೆ 1500/- ರೂ. ಮಾರಾಟ ಮಾಡಿರುತ್ತಾಳೆ ಎಂದರೆ ಸರಿ. 1968 ರಿಂದ ಇಲ್ಲಿಯವರೆಗೆ ದಾವಾ ಆಸ್ತಿಯ ಮಾಲೀಕಳು ಮತ್ತು ಕಬ್ಜಾದಾರಳು ವಾದಿಯೇ ಇರುತ್ತಾಳೆ ಎಂದರೆ ಸರಿಯಲ್ಲ. ನಾವು ಚಿಕ್ಕವರು ಇರುವಾಗ ನಮ್ಮ ತಂದೆ ವಿಲ್ ಮಾಡಿಕೊಟ್ಟಿರುತ್ತಾರೆ. ಕಂದಾಯ ಅಧಿಕಾರಿಗಳೊಂದಿಗೆ ಮಿಲಾಪೆಯಾಗಿ ವಾದಿಗೆ ಗೊತ್ತಾಗದೇ ಹಾಗೇ ನಮ್ಮ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯವನ್ನು ನೀಡಲಾಯಿತು.

ಮರು ವಿಚಾರಣೆಃ ಇರುವುದಿಲ್ಲ

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ
ನ್ಯಾಯಾಧೀಶರು,ಶಹಾಪೂರ .